ದಿನಾಂಕಃ 18.02.2025

ಅಸಲು ದಾವಃ 97/2023

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಎಂ.ಎ ಬಿಎಡ್ ಓದಿರುತ್ತೇನೆ. ನನ್ನ ತಂದೆ ಕಳೆದ ತಿಂಗಳು ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ನಾವು 4 ಜನ ಮಕ್ಕಳು ಇಬ್ಬರು ಗಂಡು ಮಕ್ಕಳು ಹಾಗು ಇಬ್ಬರು ಹೆಣ್ಣು ಮಕ್ಕಳು. ನನ್ನ ಅಣ್ಣನ ಹೆಸರು ಶಿವಣ್ಣ. ದಾವ ಸ್ವತ್ತಿನ ಪೂರ್ವ ಭಾಗದಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿ ಇರುವ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವ ಶೆಡ್ಯೂಲ್ ನಲ್ಲಿ ನಮೂದಿರುವ ಸರ್ವೆ ನಂ.216/1ರಲ್ಲಿ 39 ವರೆ ಗುಂಟೆ ಜಮೀನು ಇರುತ್ತದೆ. ನಿಪಿ1ರಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುವ ಶಿವಣ್ಣ ನಿಮ್ಮ ಅಣ್ಣ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಇನ್ನೊಬ್ಬ ಸಾಕ್ಷಿ ಡಿ.ಸ್ವಾಮಿ ಅವರು ನಿಮ್ಮ ಸ್ನೇಹಿತರು ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಸರಸ್ವತ್ತಮ್ಮ ಅವರಿಗೆ ಒಟ್ಟು 3 ಜನ ಮಕ್ಕಳು. ದಾವ ಸ್ವತ್ತನ್ನು 1970ರಲ್ಲಿ ಪ್ರತಿವಾದಿ ಸರಸ್ವತಿ ಅವರ ಮಾವ ನಮ್ಮ ತಾತನಿಂದ ಖರೀದಿ ಮಾಡಿದ್ದರು. ಆ ಸ್ವತ್ತು ಕೃಷ್ಣಮೂರ್ತಿ ರ ಹೆಸರಿನಲ್ಲಿ ಇದ್ದು ಅವರು ತೀರಿಕೊಂಡ ನಂತರ ಸರಸ್ವತ್ತಮ್ಮನವರ ಹೆಸರಿಗೆ ಪೌತಿ ಖಾತಿಯಾಗಿರುತ್ತದೆ ಎಂದರೆ ಸರಿ. ಅಗ್ರಿಮೆಂಟ್ ಗೆ ಸರಸ್ವತ್ತಮ್ಮನವರ ಮೂರು ಜನ ಮಕ್ಕಳ ಸಹಿ ಪಡೆದುಕೊಳ್ಳಲು ತೊಂದರೆ ಇತ್ತ ಎಂದರೆ ಸಾಕ್ಷಿ ತೊಂದರೆ ಏನು ಇರಲಿಲ್ಲ ಪತ್ರ ನೋಂದಣಿ ಮಾಡಿಕೊಡುವ ಸಮಯದಲ್ಲಿ ಮಕ್ಕಳನ್ನು ಕರೆದುಕೊಂಡು ಬಂದು ಸಹಿ ಮಾಡಿಸಿ ಪತ್ರ ನೊಂದಣಿ ಮಾಡಿಕೊಡುವುದಾಗಿ ಹೇಳಿದ್ದರು ಅದಕ್ಕೆ ಮಾಡಿಸಿಕೊಳ್ಳಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಅಣ್ಣ ವಿಭಾಗ ಆಗಿರುವುದಿಲ್ಲ ಹಾಗೆಯೇ ಜಮೀನುಗಳನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ನನ್ನ ಅಣ್ಣ ಶಿವಣ್ಣನೂ ಸಹ ಸರಸ್ವತ್ತಮ್ಮನ ಮೇಲೆ ಒಂದು ಕೇಸ್ ಹಾಕಿದ್ದಾರೆ ಎಂದರೆ ಸರಿ. ಯಾವ ಆಸ್ತಿಗೆ ಸಂಬಂಧಿಸಿದಂತೆ ಕೇಸು ಹಾಕಿದ್ದಾರೆ ಎಂದರೆ ಸಾಕ್ಷಿ ಸರ್ವೆ ನಂ.216ರಲ್ಲಿ ನಾನು ಅರ್ಧ ಆಸ್ತಿಗೆ ಮತ್ತು ನನ್ನ ಅಣ್ಣ ಆಸ್ತಿಗೆ ಅಗ್ರಿಮೆಂಟ್ ಬರೆಸಿಕೊಂಡಿದ್ದೇವೆ ಆ ಬಾಬ್ತು ಕೇಸು ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ಅವರ

ಅಗ್ರಿಮೆಂಟ್ ಗೆ ನೀವು ಸಾಕ್ಷಿಯಾಗಿ ಸಹಿ ಹಾಕಿದ್ದೀರ ಎಂದರೆ ಸಾಕ್ಷಿ ಹೌದು ಅವರ ಅಗ್ರಿಮೆಂಟ್ ರೂ.1 ಲಕ್ಷದ ಸಾಲದ ಬಾಬ್ತು ಆಗಿತ್ತು ಅದನ್ನು ನನ್ನ ಅಗ್ರಿಮೆಂಟ್ ಸಮಯದಲ್ಲಿ ರದ್ದು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಒಟ್ಟು ಎಷ್ಟು ಅಗ್ರಿಮೆಂಟ್ ಆಗಿದೆ ಎಂದರೆ ಸಾಕ್ಷಿ ಮೊದಲು ಸಾಲದ ಬಾಬ್ತು ಒಂದು ಅಗ್ರಿಮೆಂಟ್ ಆಗಿತ್ತು ನಂತರ ಅದನ್ನು ರದ್ದು ಮಾಡಿ ಕೊಟ್ಟರು ಆ ನಂತರ ನನಗೆ 19 ಗುಂಟೆ ಅಗ್ರಿಮೆಂಟ್ ಮಾಡಿಕೊಟ್ಟರು ಆ ನಂತರ ನನ್ನ ಅಣ್ಣನಿಗೆ 19 ಗುಂಟೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಈ ದಾವ ಹಾಕುವುದಕ್ಕಿಂತ ಮೊದಲು ನಿಮಗೆ ಸರಸ್ವತ್ತಮ್ಮನವರ ಕಡೆಯಿಂದ ಒಂದು ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ಅವರ ಕಡೆಯಿಂದ ನನಗೆ ಯಾವ ನೋಟೀಸ್ ಬಂದಿಲ್ಲ, ನಾನು ಅವರಿಗೆ ನೋಟೀಸ್ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಕೊಟ್ಟ ನೋಟೀಸಿನಲ್ಲಾಗಲಿ, ಈ ದಾವೆಯಲ್ಲಾಗಲಿ ಹಿಂದೆ ರೂ.1 ಲಕ್ಷ ಸಾಲದ ಬಾಬ್ತು ಅಗ್ರಿಮೆಂಟ್ ಆಗಿ ರದ್ದು ಮಾಡಿಕೊಂಡ ವಿಚಾರನ್ನು ಹೇಳಿದ್ದೀರ ಎಂದರೆ ಸಾಕ್ಷಿ ಅದು ನನ್ನ ಅಣ್ಣನ ಬಳಿ ಸಾಲದ ಬಾಬ್ತು ಮಾಡಿಕೊಟ್ಟ ಅಗ್ರಿಮೆಂಟ್ ಆಗಿದ್ದರಿಂದ ನನ್ನ ವ್ಯವಹಾರದಲ್ಲಿ ಆ ಬಗ್ಗೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.